ಧ್ವನಿ ಚೆಂದ ಕೇಳಿಸ್ತದ. ಒಳ್ಳೇ ಧ್ವನಿಮುದ್ರಣ ಮಾಡಬಹುದು. ನಿನಗ ಸಂಗೀತಾ ಕಲಿಯದಕ, ರಿಯಾಜ್ ಮಾಡದಕ, ಎಲ್ಲಾದರೂ ಕಾರ್ಯಕ್ರಮಕ ಹೋದರ ಬೇಕಾತದ ಇರಲಿ' ಎಂದು ಕೊಡಿಸಿದ್ದ. ಶಿಲ್ಪಾಳಿಗೂ ಮೊಬೈಲ್ ಬಹಳಷ್ಟು ಸಂತೋಷ ನೀಡಿತ್ತು. ಸಂಗೀತದ ಕಲಿಕೆಗಂತೂ ಬಹಳ ಉಪಯುಕ್ತವಿತ್ತು. ಅದರಲ್ಲಿ ದಿನಾಲು ನೂರಾರು ಸಂದೇಶಗಳು ಬರುತ್ತಿದ್ದವು, ಹೋಗುತ್ತಿದ್ದವು. ಅವುಗಳನ್ನು ಗಂಡನು ನೋಡುತ್ತಿದ್ದ. ಒಳ್ಳೆಯ ಸಂದೇಶಗಳನ್ನು ಗಂಡನಿಗೆ ತೋರಿಸುತ್ತಿದ್ದಳು. ಆತನಿಗೂ ಸಂತೋಷವಾಗುತ್ತಿತ್ತು. ಶಿಲ್ಪಾಳಿಗೆ ಗಂಡನನ್ನು ಬಿಟ್ಟರೆ ಸಂಗೀತಾ ಮತ್ತು ಪಂಡಿತ್ ಅಲಿಖಾನ್ ಗುರುಗಳು ಆಕೆಯ ಜಗತ್ತು. ಗುರುಗಳು ಆಗಾಗ ನೆನಪು ಮಾಡಕೊಂಡು 'ಸಂಗೀತಾ ಮಾತ್ರ ಮರಿಬ್ಯಾಡವ್ವ. ನಿನಗ ರಾಗಗಳು ಬೇಗ ಒಲಿತಾವ. ನೀನು ನಮ್ಮ ಘರಾನ ಪರಂಪರೆ ಮುಂದುವರಸುತ್ತಿ. ನನಗ ಬೇರೆ ಯಾರ ಮ್ಯಾಗ ಭರವಸೆ ಇಲ್ಲವ್ವ. ರಿಯಾಜ್ ಮಾತ್ರ ನಿಲ್ಲಸಬ್ಯಾಡವ್ವಾ' ಎಂದು ಸಂದೇಶ ಕಳಿಸುತ್ತಿದ್ದರು.

ಆಕೆಯ ಗಂಡನು ಶಿಲ್ಪಾಳ ಜೊತೆ ಗುರುಗಳಾದ ಪಂಡಿತ್ ಅಲಿಖಾನ್‌ರನ್ನು ಭೇಟಿಯಾಗಿ ಬಂದಿದ್ದ. ತಮ್ಮ ಮದುವೆ ಫೋಟೊ ಜೊತೆಗೆ ಅಲಿಖಾನ್‌ರ ಫೋಟೊವನ್ನು ತೂಗು ಹಾಕಿದ್ದರು. ಮನೆಗೆ ಬಂದವರಿಗೆಲ್ಲಾ ಪಂಡಿತ್ ಅಲಿಖಾನರ ಬಗ್ಗೆ ಬಹಳ ಹೆಮ್ಮೆಯಿಂದ 'ಅವರೇ ನನ್ನ ಶಿಲ್ಪಾಳ ಗುರುಗಳು. ಈಗಲೂ ಸಂಗೀತಾ ಕಲಿಯಲು ಹೋಗುತ್ತಾಳೆ. ಎಷ್ಟು ಕಲಿತರೂ ಅದು ಮುಗಿಯೋದಿಲ್ಲ. ನಮ್ಮ ಸಾಫ್ಟ್‌ವೇರ್ ಎಂಜಿನಿಯರ್ ತರಾ ಅಲ್ಲ. ಒಂದು ಪ್ರಾಜೆಕ್ಟ ಮುಗಿಸಿದರ ಲಕ್ಷಾನುಗಟ್ಟಲೆ ಹಣ ಹರಿದು ಬರುತ್ತೆ. ಆದರೆ ಸಂಗೀತಾ ಹಾಗಲ್ಲ. ಮನಸ್ಸಿಗೆ ನೆಮ್ಮದಿ ನೀಡುತ್ತೆ. ಅದಕ್ಕ ಬೆಲೆ ಕಟ್ಟಲಿಕ್ಕೆ ಆಗುವುದಿಲ್ಲ. ಅದರಲ್ಲೂ ಗುರುಗಳು ಒಲಿಯುವದು ಬಾಳ ಕಷ್ಟ. ನಮ್ಮ ಶಿಲ್ಪಾಳಿಗೆ ಪಂಡಿತ್ ಅಲಿಖಾನ್ ಗುರುಗಳು ಆಶೀರ್ವಾದ ಮಾಡ್ಯಾರ, ಅದು ನಮ್ಮ ಪುಣ್ಯ' ಎಂದು ಹೇಳುತಿದ್ದ.

ವರ್ಷಕ್ಕೊಂದು ಸಾರಿ, ಇಲ್ಲ ಎರಡು ಸಾರಿ ಪಾಠ ಹೇಳಿಸಿಕೊಳ್ಳಲು ಶಿಲ್ಪಾ ಗುರುಗಳ ಹತ್ತಿರ ಹೋಗುತ್ತಿದ್ದಳು. ಎಲ್ಲವೂ ಸಾಮಾನ್ಯದಂತೆ ನಡೆಯುತ್ತಿತ್ತು. ಗಂಡನಿಗೆ ಏನನಿಸಿತೋ ಎರಡು ಮೂರು ವರ್ಷದಿಂದ ಯಾವುದೋ 'ಸತ್ಸಂಗ' ಅಂತ ಸೇರಿದ. ಸಮಾನಮನಸ್ಕರು ಸೇರಿ ದೇಶ, ಭಾಷೆ, ಸಂಸ್ಕೃತಿ, ಪರಂಪರೆ, ಚರಿತ್ರೆ ಕುರಿತು ಚಿಂತಿಸುವ ವೇದಿಕೆ. ಮನೆಯಲ್ಲಿರುವ ಮಕ್ಕಳನ್ನು ಬೆಳೆಸುವುದು ಹೇಗೆ, ಸಂಸ್ಕಾರ ನೀಡುವುದು ಹೇಗೆ, ಉತ್ತಮ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವುದು ಹೇಗೆ ಎಂಬ ವಿಷಯಗಳನ್ನು ಕುರಿತು ತಿಂಗಳಿಗೊಮ್ಮೆ ಸಭೆ ಸೇರಿ ಚರ್ಚಿಸುತ್ತಿದ್ದರು. 'ವಿದೇಶಿ ವ್ಯಾಮೋಹಕ್ಕೆ ಒಳಗಾಗಿ ನಮ್ಮ ಸ್ವಾಭಿಮಾನ, ಸಂಸ್ಕೃತಿಗಳನ್ನು ಕಳೆದುಕೊಂಡಿದ್ದೇವೆ. ಮತ್ತೆ ಅವುಗಳನ್ನು ಪುನರ್ ಸ್ಥಾಪಿಸುವುದು ನಮ್ಮ ಜವಾಬ್ದಾರಿ' ಎಂದು ಸಾಫ್ಟ್‌ವೇರ್ ಗೆಳೆಯರೆಲ್ಲಾ ಸೇರಿ ಅಂತರ್ಜಾಲ ಗುಂಪುಗಳನ್ನು ಮಾಡಿಕೊಂಡು ಪ್ರಚಾರ ಮಾಡುತ್ತಿದ್ದರು. ಶಿಲ್ಪಾಳ ಗಂಡನು ಇವರೊಂದಿಗೆ ಇದ್ದ. ಈ ಗುಂಪಿಗೆ ಸೇರಿದ ಮೇಲೆ ಮನೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ತಂದ. ಅದರಲ್ಲೂ ಬಟ್ಟೆ ಬರೆಯಲ್ಲಿ ಬಹಳ ಕಟ್ಟುನಿಟ್ಟಾದ. 'ಮೈತುಂಬಾ ಬಟ್ಟೆ ಉಟುಗಂಡು ಓಡಾಡ್ರಿ. ಮಗಳಿಗೂ ಯಾವ್ಯಾವೋ ಬಟ್ಟೆ ತರಬೇಡ. ನಮ್ಮ ಸಂಸ್ಕೃತಿ ಉಳಿಬೇಕು. ಈಗಾಗಲೆ ಬೇಕಾದಷ್ಟು ನಾವು ಹಾಳು ಮಾಡಿಕಂಡೀವಿ. ಇನ್ನೂ ನಮ್ಮ ಮಕ್ಕಳು ಹಾಳಾಗೋದು ಬ್ಯಾಡ' ಎಂದು ಶಿಲ್ಪಾಳಿಗೆ ಹೇಳುತ್ತಿದ್ದ. ಬಡವರಿಗೆ ಸಹಾಯ ಮಾಡಬೇಕೆಂದು ಅನಾಥಾಶ್ರಮಗಳಿಗೆ, ವೃದ್ಧಾಶ್ರಮಗಳಿಗೆ, ಅಂಧರ ಆಶ್ರಮಗಳಿಗೆ, ಕೊಳಚೆ ಪ್ರದೇಶಗಳಿಗೆ ಭೇಟಿ ನೀಡಿ ದಾನ ಮಾಡುತ್ತಿದ್ದ. ದೇಶವನ್ನು ಬಲಿಷ್ಠಗೊಳಿಸಬೇಕೆಂದು ಹೇಳುತ್ತಿದ್ದ. ಶಿಲ್ಪಾಳಿಗೆ ಸಂಗೀತವೇ ದೊಡ್ಡ ಪ್ರಪಂಚ ಆಗಿದ್ದರಿಂದ ಗಂಡನ ಈ ವಿಚಾರಗಳಿಗೆ ಯಾವ ಪ್ರತಿಕ್ರಿಯೆಯನ್ನು ನೀಡದೆ ಹೇಳಿದಂತೆ ಕೇಳಿಕೊಂಡು ಹೋಗುತ್ತಿದ್ದಳು.

ವಾರದ ಹಿಂದೆ ಶಿಲ್ಪಾಳ ಮೊಬೈಲ್‌ನ್ನು ನೋಡುತ್ತಿದ್ದ. ಅದರಲ್ಲಿ ಪಂಡಿತ್ ಅಲಿಖಾನ್‌ರ ಸಂದೇಶವಿತ್ತು. 'ಶಿಲ್ಪಾ, ನೀನು ಎಂತ ಸಂಸ್ಕಾರವಂತಳಮ್ಮ, ಗುರುವಿಗೆ ಗುರುವಾಗಿದ್ದಿ. ನಿನ್ನಂತ ಸಮರ್ಪಣಾ ಶಿಷ್ಯರು ಈಗಿಲ್ಲ' ಎಂದಿತ್ತು. 'ಸಮರ್ಪಣಾ ಶಿಷ್ಯೆ' ಎಂಬ ಪದ ಆತನಲ್ಲಿ ತಳಮಳವನ್ನುಂಟು ಮಾಡಿತು. ಈ ಸತ್ಸಂಗ ಸೇರಿದ ಮೇಲೆ ಅನೇಕ ಗೆಳೆಯರು 'ನಿನ್ನ ಹೆಂಡತಿ ಗುರುಗಳು ಪಂಡಿತ್ ಅಲಿಖಾನ್ ಅವರು ಅಲ್ವಾ. ಯಾಕೆ ಬೇರೆ ಗುರುಗಳು ಸಿಗಲಿಲ್ಲವೆ ನಿಮಗೆ. ಸಂಗೀತಾ ಕಲಿವಾಗ ಏನೇನು ನಡೆದಿದೆಯೋ ಯಾರಿಗೆ ಗೊತ್ತು. ಅವರು ಏನು ಮಾಡಲೂ ಹೇಸುವುದಿಲ್ಲ. ಏನಾಗಲಿ ಜಾಗ್ರತವಾಗಿರಿ. ಒಂದು ಸಾರಿ ಮನಶಾಸ್ತ್ರಜ್ಞರಲ್ಲಿ ಸಮಾಲೋಚನೆ ಮಾಡುವುದು ಒಳ್ಳೆಯದು' ಎಂದು ಹೇಳಿದ್ದರು. ಈ ಸಂದೇಶ ನೋಡಿ ಗೆಳೆಯರು ಹೇಳಿದ ಮಾತುಗಳೆಲ್ಲವೂ ನೆನಪಾದವು. ಮನಸ್ಸಿನಲ್ಲಿಯೇ ಉರಿ ಉರಿದು ಹೋದ. 'ಸಮರ್ಪಣಾ ಶಿಷ್ಯೆ' ಎಂದರೆ ಏನು ಎಂದು ಹೆಂಡತಿಯನ್ನು ಕೇಳಬೇಕೆಂದು ಪ್ರಯತ್ನಿಸಿದ. ಆಗಲೇ ಇಲ್ಲ. ಹೆಂಡತಿಯ ಮುಗ್ಧ ಸ್ನಿಗ್ಧ ಮುಖವನ್ನು ನೋಡಿದಾಗ ಕೇಳಲು ಮನಸ್ಸೇ ಆಗುತ್ತಿರಲಿಲ್ಲ. ಆದರೆ ಮನಸ್ಸಿನಲ್ಲಿ ಅದು ಗುಂಗಾಣಿಯಂತೆ ಕೊರೆಯುತಿತ್ತು.

ನಾಲ್ಕು ದಿನಗಳ ಹಿಂದೆ ಸಂಜೆ ಮನೆಗೆ ಬಂದವನೇ 'ಬೇಗ ತಯಾರಾಗು. ಒಬ್ಬರಲ್ಲಿಗೆ ಹೋಗಬೇಕಿದೆ. ಅವರು ದೊಡ್ಡ ಜ್ಯೋತಿಷಿಗಳು. ನಮ್ಮ ಸತ್ಸಂಗದ ಮಾರ್ಗದರ್ಶಕರು. ದೇಶದ, ಧರ್ಮದ ಏಳಿಗೆಗಾಗಿ ತಮ್ಮನ್ನು ಸಮರ್ಪಿಸಿಕೊಂಡವರು. ನಿಮ್ಮ ಗುರುಗಳ ಹಾಗೆ ಕಂಡ ಕಂಡವರಿಂದ ಸಮರ್ಪಣೆ ಕೇಳುವವರಲ್ಲ. ಅವರು ಮುಖ ನೋಡಿ ನಮ್ಮ ಚರಿತ್ರೆ ಹೇಳುತ್ತಾರೆ. ಅವರು ನಿನ್ನ ನೋಡಬೇಕಂತಾರ. ಮೈತುಂಬಾ ಸೀರೆ ಉಟ್ಟುಕೋ. ಜೊತೆಗೆ ಮಗಳು ಬರಲಿ' ಎಂದು ಕಾರಲ್ಲಿ ಎತ್ತಿ ಹಾಕಿಕೊಂಡಂತೆ ದಿಢೀರ್ ಕರೆದುಕೊಂಡು ಹೋದ.

ಜ್ಯೋತಿಷಿಗಳು ಶಿಲ್ಪಾಳನ್ನು ಮುಂದೆ ಕೂಡಿಸಿಕೊಂಡು ಮುಖವನ್ನು ತದೇಕಚಿತ್ತದಿಂದ ನೋಡಿದರು. ಶಿಲ್ಪಾಳಿಗೆ ಕ್ಷಣ ಭಯವೇ ಆಯಿತು.

'ನಿಮ್ಮ ಅಲಿಖಾನ್ ಗುರುಗಳು ಹೇಗೆ?'

'ಅಲ್ಲ, ಅವರು ಪಂಡಿತ್ ಅಲಿಖಾನ್ ಗುರುಗಳು, ದೇವರಂಥವರು.'

'ಅವರನ್ನು ದೇವರೆಂದು ಹೇಗೆ ಕರೆಯುವುದು.'

'ಮಹಾನ್ ಸಂಗೀತಾ ಯೋಗಿಗಳು. ರಾಗಗಳನ್ನು ಕಂಡುಹಿಡಿದವರು. ನಮ್ಮಂತ ನೂರಾರು ಶಿಷ್ಯರಿಗೆ ಸಂಗೀತಾ ಕಲಿಸಿದವರು.'

'ಅವರಿಗೆ ಪ್ರತಿಯೊಬ್ಬರು ಸಂಪೂರ್ಣ ಅರ್ಪಿಸಿಕೊಳ್ಳಬೇಕಂತೆ.'

'ಹೌದು. ಸಂಗೀತಾ ಕಲಿಕೆಯಲ್ಲಿ ಸಮರ್ಪಣಾ ಭಾವ ಇಲ್ಲದಿದ್ದರೆ, ರಾಗಗಳು ಒಲಿಯುವುದಿಲ್ಲ. ರಾಗಗಳು ಒಲಿಯುವುದೆಂದರೆ ಸಾಕ್ಷಾತ್ ದೇವರೇ ಸಾಕ್ಷಾತ್ಕಾರವಾದ ಹಾಗೆ.'

'ಸಮರ್ಪಣಾ ಭಾವ ಎಂದರೆ ಹೇಗೆ?'

'ಆತ್ಮ ಸಮರ್ಪಣೆ.'

'ದೇಹ–ಆತ್ಮ ಬೇರೆ ಬೇರೆಯೇ? ಎಲ್ಲಾ ಅವರ ಢೋಂಗಿತನ.'

'ನೀವು ಹಿರಿಯರು ಹಾಗೆಲ್ಲಾ ಮಾತಾಡಬಾರದು.'

'ಇರಲಿ. ಇನ್ನೂ ಮುಂದಾದರೂ ಅಂತವರ ಸಹವಾಸ ಮಾಡಬೇಡಿ. ನಮ್ಮನ್ನೆಲ್ಲಾ ಹಾಳು ಮಾಡಲೇ ಇಂಥವರು ಹುಟ್ಟಿದ್ದಾರೆ' ಎಂದು ಜ್ಯೋತಿಷಿ ಮಂತ್ರಿಸಿದ ನಿಂಬೆಕಾಯಿಯನ್ನು ಆಕೆಯ ಸೆರಗಿಗೆ ಕಟ್ಟಿದ. ಆತನ ಉಸಿರು ಶಿಲ್ಪಾಳಿಗೆ ವಾಕರಿಕೆ ತರಿಸಿತ್ತು.

ಶಿಲ್ಪಾ ಕಣ್ಣೀರು ಸುರಿಸುತ್ತಾ ಅಲ್ಲಿಂದ ಎದ್ದು ಬಂದಿದ್ದಳು. 'ಶಿಷ್ಯರು ಹೇಗಿದ್ದರೇನು. ಯಾಕೆ ಅವರ ಬಗ್ಗೆ ಪದೇ ಪದೇ ವಿಚಾರ ಮಾಡಬೇಕು. ಸಂದೇಶ ಕಳಿಸಬೇಕು. ಏನಾದರೂ ಘಟಿಸಿದ್ದರೆ ತಾನೆ ಮನಸ್ಸಲ್ಲಿ ಉಳಿಯೋದು' ಎಂದು ಜ್ಯೋತಿಷಿ ಗಂಡನ ಕಿವಿ ಊದಿದ. 'ಈ ಸಮರ್ಪಣಾ ಭಾವ ಅನ್ನೋ ಗುರುಗಳ ಮ್ಯಾಲ ಸದಾ ಕಣ್ಣಿಟ್ಟಿರಬೇಕು. ಅದರಲ್ಲೂ ಗುರುಗಳ ಒಡನಾಟದಲ್ಲಿರುವವರು ಏನೇನು ಆಟ ಆಡಿರುತಾರೋ ಯಾರಿಗೊತ್ತು. ನೀನು ಮಾತ್ರ ಎಚ್ಚರದಿಂದ ಇರು. ನನ್ನ ತಾಯಿಯನ್ನೇ ನಾನು ನಂಬುತ್ತಿರಲಿಲ್ಲ. ನಾನು ಕಾವಲು ನಾಯಿಯಂತೆ ಕಾಯುತ್ತಿದ್ದೆ. ನನ್ನಪ್ಪ ದಿನಾಲು ಒದೆ ಕೊಡುತ್ತಿದ್ದ. ಮನೆಯಿಂದ ಹೊರಗಡೆ ಕಳಿಸುತ್ತಲೇ ಇರಲಿಲ್ಲ. ಆದರೂ ಆಕಿ ನಮ್ಮನ್ನು ಬಿಟ್ಟು ಬೇರೆಯವನೊಂದಿಗೆ ಹೋದಳು' ಎಂದು ಜ್ಯೋತಿಷಿ ಗಂಡನ ಆತ್ಮಕ್ಕೆ ಕೊಳ್ಳಿ ಇಟ್ಟ.

ಶಿಲ್ಪಾ ಭೇಟಿಯಾದ ಮರುದಿನ ಮನೆಯಲ್ಲಿ ಯಜ್ಞ ಮಾಡಲು ಗಂಡ ಜ್ಯೋತಿಷಿಯನ್ನು ಕರೆದುಕೊಂಡು ಬಂದ. ಜ್ಯೋತಿಷಿ ಪಂಡಿತ್ ಅಲಿಖಾನರ ಫೋಟೊವನ್ನು ನೋಡಿ ಕೆಂಡಾಮಂಡಲನಾದ. 'ಮೊದಲು ಈ ಫೋಟೊವನ್ನು ಸುಟ್ಟು ಹಾಕಿರಿ' ಎಂದು ಅಬ್ಬರಿಸಿದ. ಗಂಡ ತಕ್ಷಣಕ್ಕೆ ಫೋಟೊ ತೆಗೆದು ಯಜ್ಞದ ಕುಂಡದಲ್ಲಿ ಹಾಕಿದ್ದ. ಇದೆಲ್ಲವನ್ನು ನೋಡುತ್ತಿದ್ದ ಶಿಲ್ಪಾಳ ಹೃದಯ ಹೊತ್ತಿ ಉರಿಯುತ್ತಿತ್ತು. ಗಂಡನನ್ನು ಯಾರಾದರೂ